**ಕರ್ನಾಟಕ ಸರ್ಕಾರ**

**ಸಂಖ್ಯೆ:** ಗ್ರಾಅಪ 220 ಇತರೆ 2012

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ ,
ಬೆಂಗಳೂರು, ದಿನಾಂಕ–25/03/2013

**ಇವರಿಂದ:**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

ನೆನಪೋಲೆ–3
**ತುರ್ತು**

**ಇವರಿಗೆ:**
ಎಲ್ಲಾ ಜಿ.ಪಂ. ಮು. ಕಾ .ನಿ. ಅಧಿಕಾರಿಗಳು, (ಬೆಂಗಳೂರು (ನಗರ):ದಕ್ಷಿಣ ಕನ್ನಡ:ಶಿವಮೊಗ್ಗ: ಚಿತ್ರದುರ್ಗ ಹಾವೇರಿ ಜಿ.ಪಂ.ಹೊರತು ಪಡಿಸಿ)

**ಮಾನ್ಯರೆ,**

**ವಿಷಯ:** ಮಾಹಿತಿ ಹಕ್ಕು ಅಧಿನಿಯಮ 2005ರ ಪ್ರಕರಣ 26 (3) (ಬಿ)ರಡಿ ಮಾಹಿತಿ ತಯಾರಿಸಿ ಕಳುಹಿಸುವ ಬಗ್ಗೆ.

****

ಮಾಹಿತಿ ಹಕ್ಕು ಅಧಿನಿಯಮ 2005ರ ಪ್ರಕರಣ 26 (3) (ಬಿ) ರಡಿ ಅಗತ್ಯ ಮಾಹಿತಿ ಸಂಗ್ರಹಿಸಿ ಕ್ರೋಢಿಕೃತ ಮಾಹಿತಿ ಕಳುಹಿಸಲು ಕೋರಿದ್ದ ಸರ್ಕಾರದ ಇದೇ ಸಮ ಸಂಖ್ಯೆಯ ದಿ:19–12–2012ರ ಪತ್ರ ಮತ್ತು ದಿನಾಂಕ:11–1–2013, 22–2–2013ರ ನೆನಪೋಲೆಗಳತ್ತ ಗಮನ ಸೆಳೆಯಲಾಗಿದೆ. ತಮ್ಮಿಂದ ಸದರಿ ಮಾಹಿತಿಯು ಈವರೆವಿಗೂ ಸ್ವೀಕೃತವಾಗದಿರುವುದರಿಂದ ಸಿ.ಆಸು.ಇ. (ಜನಸ್ಪಂದನ–ಮಾಹಿತಿಹಕ್ಕು)ಯು ಕೇಳಿರುವ ಮಾಹಿತಿ ಒದಗಿಸಲು ಸಾಧ್ಯವಾಗಿರುವುದಿಲ್ಲ.

ಮಂಡ್ಯ /ಕೋಲಾರ/ ಉಡುಪಿ ಜಿಲ್ಲಾ ಪಂಚಾಯತಿಗಳಿಂದ ಸ್ವೀಕರಿಸಿದ ಮಾಹಿತಿ ಪರಿಶೀಲಿಸಲಾಗಿ ಮಂಡ್ಯ ಜಿ.ಪಂ. ಮತ್ತು ಅದರಡಿಯ 7 ತಾಲ್ಲೂಕು ಪಂ.ಗಳ ಕೋಲಾರ ತಾಲ್ಲೂಕು ಪಂಚಾಯತಿ ವ್ಯಾಪ್ತಿಯ ಒಂದು ಗ್ರಾಮ ಪಂಚಾಯತ್, ಮತ್ತು ಕಾರ್ಕಳ ತಾಲ್ಲೂಕು ಪಂಚಾಯತಿ 29 ಗ್ರಾ.ಪಂ ಒಳಗೊಂಡ ಪೂರ್ಣ ಮಾಹಿತಿ ಒದಗಿಸಿರುವುದಿಲ್ಲ ಅದ್ದರಿಂದ ಪೂರ್ಣ ಮಾಹಿತಿ ಕಳುಹಿಸುವಂತೆ ಕೋರಿದೆ.

ಸಿ.ಆಸುಇ (ಜನಸ್ಪಂದನ–ಮಾಹಿತಿ ಹಕ್ಕು ) ಯಿಂದ ಕ್ರೋಢೀಕೃತ ಪೂರ್ಣ ಮಾಹಿತಿ ಕೋರಿ ಒತ್ತಾಯದ ನೆನೆಪೋಲೆಗಳು/ ಕರೆಗಳು ಬರುತ್ತಿವೆ. ದಿ:11–2–2013ರ ನೆನೆಪೋಲೆ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.

ಆದುದರಿಂದ ಮೊದಲ ಆದ್ಯತೆಯ ಮೇರೆಗೆ ತಮ್ಮ ಜಿ.ಪಂ. ಮತ್ತು ಅಧೀನದ ತಾ.ಪಂ./ಗ್ರಾ.ಪಂ ಒಳಗೊಂಡ ಎಲ್ಲ ಪಿ.ಎ/ ಪಿ.ಐ.ಓ.ಗಳ ಅಪೇಕ್ಷಿತ ಪೂರ್ಣ ಮಾಹಿತಿಯನ್ನು ಅತೀ ತುರ್ತಾಗಿ ಇಂದೇ ಫ್ಯಾಕ್ಸ್ ಮೂಲಕ ಮತ್ತು ಮರು ಟಪಾಲಿನಲ್ಲಿ ಕಳುಹಿಸಿಕೊಡಲು ಮತ್ತೊಮ್ಮೆ ಕೋರಲಾಗಿದೆ.

ತಮ್ಮ ವಿಶ್ವಾಸಿ,
ಎಂ. ಎಸ್. ಸ್ವಾಮಿ
(ಎಂ.ಎಸ್.ಸ್ವಾಮಿ), 25/3/2013
ಸರ್ಕಾರದ ಅಪರ ಕಾರ್ಯದರ್ಶಿ, (ಆಡಳಿತ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿ ಅಗತ್ಯ ಮಾಹಿತಿಗಾಗಿ :–
1)ನಿರ್ದೇಶಕರು ಗ್ರಾಮೂಸೌ–1/ಗ್ರಾಮೂಸೌ–2/ ಪಂ.ರಾಜ್ : ಪಿ.ಎಂ.ಐ: ಸುಗ್ರಾಯೋ, ಗ್ರಾಅಪ ಇಲಾಖೆ.
2)ಆಂತರಿಕ ಆರ್ಥಿಕ ಸಲಹೆಗಾರರು ಗ್ರಾಅಪ ಇಲಾಖೆ.
3)ಉಪ ಕಾರ್ಯದರ್ಶಿ ಗ್ರಾನೀಸ ಗ್ರಾಅಪ ಇಲಾಖೆ.
4)ಸರ್ಕಾರದ ಅಧೀನ ಕಾರ್ಯದರ್ಶಿ ಸೇವೆಗಳು–ಎ/ ಸೇವೆಗಳು–ಬಿ, ಗ್ರಾಅಪ ಇಲಾಖೆ.
5)ಲೆಕ್ಕಾಧಿಕಾರಿ : ಶಾಖಾಧಿಕಾರಿ ಆಂ.ಆ.ಸ. ಗ್ರಾಅಪ ಇಲಾಖೆ.
6)ಅನಾಲಿಸ್ಟ್ ಕಂಪ್ಯೂಟರ್ ಶೆಲ್ ಗ್ರಾಅಪ ಇಲಾಖೆ.
7)ಪೀಠಾಧಿಕಾರಿ (ಗ್ರಾ.ಪಂ.) ಗ್ರಾಅಪ ಇಲಾಖೆ.

ಪ್ರತಿ ಮಾಹಿತಿಗಾಗಿ:–ಸರ್ಕಾರದ ಅ.ಕಾ, ಸಿಆಸು.ಇ (ಜನಸ್ಪಂದನ–ಮಾಹಿತಿ ಹಕ್ಕು ) 3ನೇ ಮಹಡಿ , ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ , ಬೆಂಗಳೂರು. ಇವರಿಗೆ ಮೇಲ್ಕಂಡವರಿಂದ ನಿರೀಕ್ಷಿಸಿದ ಮಾಹಿತಿ ಬಂದ ಕೂಡಲೇ ಕಳುಹಿಸಿಕೊಡಲಾಗುವುದು.

# ಕರ್ನಾಟಕ ಸರ್ಕಾರ

ಸಂಖ್ಯೆ:ಸಿಆಸುಇ 129ಆರ್‌ಟಿಐ 2012

ಕರ್ನಾಟಕ ಸರ್ಕಾರದ ಸಚಿವಾಲಯ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ)
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಮುಖ್ಯ ಗೋಪುರ,
ಬೆಂಗಳೂರು, ದಿನಾಂಕ :11.02.2013

**"ನೆನಪೋಲೆ"**

**ಅನಧಿಕೃತ ಟಿಪ್ಪಣಿ**

ವಿಷಯ: ಮಾಹಿತಿ ಹಕ್ಕು ಅಧಿನಿಯಮ, 2005ರ ಪ್ರಕರಣ 26(3)(ಬಿ)ರಡಿ ಮಾಹಿತಿ ತಯಾರಿಸುವ ಬಗ್ಗೆ.

ಉಲ್ಲೇಖ: ಸಮಸಂಖ್ಯೆ ಅನಧಿಕೃತ ಟಿಪ್ಪಣಿ ದಿ:15/11/2012 ಮತ್ತು ದಿ:26.12.2012.

ಮಾಹಿತಿ ಹಕ್ಕು ಅಧಿನಿಯಮ, 2005ರ ಪ್ರಕರಣ 26(3)(ಬಿ)ರಡಿ ರಾಜ್ಯದ ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳ/ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಹುದ್ದೆ, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ ಇತ್ಯಾದಿ ವಿವರಗಳನ್ನೊಳಗೊಂಡ ವಿವರವಾದ ಪಟ್ಟಿಯನ್ನು ಕ್ರೋಢೀಕರಿಸಿ ಪ್ರಕಟಿಸುವುದು ಸಮುಚಿತ ಸರ್ಕಾರದ ಕಾರ್ಯವಾಗಿದ್ದು, ಈ ಮಾಹಿತಿಗಳನ್ನು ಒದಗಿಸುವಂತೆ ಈಗಾಗಲೇ ಹಲವಾರು ಸುತ್ತೋಲೆ/ಅರೆ ಸರ್ಕಾರಿ ಪತ್ರಗಳಲ್ಲಿ ತಮಗೆ ತಿಳಿಸಲಾಗಿದೆ. ಆದರೆ ಕೆಲವು ಕ್ಷೇತ್ರ ಇಲಾಖೆಗಳಿಂದ ಅಪೂರ್ಣ ಮಾಹಿತಿಯು ಸ್ವೀಕೃತವಾಗುತ್ತಿದ್ದು, ಕ್ರೋಢೀಕೃತ ಮಾಹಿತಿಯು ಕೇವಲ 2 ಇಲಾಖೆಗಳಿಂದ ಸ್ವೀಕೃತವಾಗಿದ್ದು (ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಮತ್ತು ಕಂದಾಯ ಇಲಾಖೆ) ಉಳಿದ ಸಚಿವಾಲಯ ಇಲಾಖೆಗಳಿಂದ ಇದುವರೆವಿಗೂ ಮಾಹಿತಿ ಬಂದಿರುವುದಿಲ್ಲ.

ಆದ್ದರಿಂದ, ತಮ್ಮ ಇಲಾಖೆಯ ಕ್ಷೇತ್ರ ಇಲಾಖೆಗಳಿಂದ ಸಾರ್ವಜನಿಕ ಪ್ರಾಧಿಕಾರಗಳ /ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಕ್ರೋಢೀಕೃತ (ಪದನಾಮ, ವಿಳಾಸ, ದೂರವಾಣಿ ಸಂಖ್ಯೆ: E-mail, fax) ಮಾಹಿತಿಯನ್ನು ಸಂಗ್ರಹಿಸಿ ಅದನ್ನು ತಾವೇ ಕ್ರೋಢೀಕರಿಸಿ, ಕ್ರೋಢೀಕರಿಸಿದ ಮಾಹಿತಿಯನ್ನು ಅತೀ ಜರೂರಾಗಿ ಕಳುಹಿಸಿಕೊಡಬೇಕೆಂದು ಉಲ್ಲೇಖಿತ ಅನಧಿಕೃತ ಟಿಪ್ಪಣಿಗಳಲ್ಲಿ ಕೋರಲಾಗಿತ್ತು ಆದರೆ ಈವರೆಗೂ ಯಾವುದೇ ಮಾಹಿತಿ ಸ್ವೀಕೃತವಾಗಿಲ್ಲದ ಕಾರಣ ತಾವು ವೈಯಕ್ತಿಕ ಗಮನವಹಿಸಿ ಮಾಹಿತಿಯನ್ನು ಕಳುಹಿಸಿಕೊಡಲು ಕ್ರಮ ಕೈಗೊಳ್ಳುವಂತೆ ಕೋರುತ್ತೇನೆ.

(ಲ.ವೆಂಕಟಗಿರಿಯಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ ಕೋಶ – ಮಾಹಿತಿ ಹಕ್ಕು)

ಇವರಿಗೆ,

ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು(ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಹಾಗೂ ಕಂದಾಯ ಇಲಾಖೆಗಳನ್ನು ಹೊರತುಪಡಿಸಿ).